ದಿನಾಂಕಃ **23.10.2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ **2** ನೇ ಪ್ರತಿವಾದಿ ಪರ ಶ್ರೀ ಬಿ ಆರ್ ವಕೀಲರಿಂದಃ-

1 ನೇ ಪ್ರತಿವಾದಿಗೆ ಇಬ್ಬರು ಹೆಂಡತಿಯರು ಎಂದರೆ ಸರಿಯಲ್ಲ. ಯಶೋಧಮ್ಮ ರವರು ನನಗೆ ಗೊತ್ತಿಲ್ಲ. ಚಂದ್ರಪ್ಪ ರವರು 1998 ರಲ್ಲಿ ಮರಣ ಹೊಂದಿರುತ್ತಾರೆ. ರಂಗಪ್ಪ ರವರ ಮಗಳು ಯಶೋಧಮ್ಮ ರವರನ್ನು ಚೋಮನಹಳ್ಳಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದ ಚಂದ್ರಪ್ಪನ ಮಗಳ ಹೆಸರು ತನುಜ ಅವರನ್ನು ಬಳೆನೇರಲು ಊರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಚಂದ್ರಪ್ಪ ರವರ ಮಗನ ಹೆಸರು ಚಂದ್ರು. ಅವರಿಬ್ಬರೂ ಜೀವಂತವಾಗಿರುತ್ತಾರೆ ಎಂದರೆ ಸರಿ.

1 ನೇ ಪ್ರತಿವಾದಿಯ ಹಿರಿಯ ಹೆಂಡತಿ ಮಗಳಾದ ಯಶೋಧ ರವರನ್ನು ಚೋಮನಹಳ್ಳಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ 3 ರ ಆಸ್ತಿ ನನ್ನ ತಂದೆಗೆ ಮಂಜೂರಾದ ಜಮೀನಾಗಿದ್ದು ಅದರಲ್ಲಿ ಸುಮಾರು 15 ವರ್ಷಗಳ ತೆಂಗಿನ ಮರಗಳು ಇರುತ್ತವೆ. ದಾವಾ ಐಟಂ ನಂ 3 ರಲ್ಲಿ ಬೋರ್ ವೆಲ್ ಇರುವುದಿಲ್ಲ. ದಾವಾ ಐಟಂ ನಂ 3 ರಲ್ಲಿ ಸುಮಾರು 150 ತೆಂಗಿನ ಮರಗಳು ಇರುತ್ತವೆ. ದಾವಾ ಐಟಂ ನಂ 3 ರಲ್ಲಿ ನಾನು ಮತ್ತು 4 ನೇ ಪ್ರತಿವಾದಿ ಸ್ವಾಧೀನ ಇರುವ ಜಮೀನಿನಲ್ಲಿ ಸುಮಾರು 70 ತೆಂಗಿನ ಮರಗಳು ಇರುತ್ತವೆ. ಸದರಿ 70 ತೆಂಗಿನ ಮರಗಳನ್ನು ನಾನು ನೋಡಿಕೊಳ್ಳುತ್ತಿರುತ್ತೇನೆ. ಅದೇ ರೀತಿ 2 ನೇ ಪ್ರತಿವಾದಿ ಸ್ವಾಧೀನ ಹೊಂದಿರುವ ಜಮೀನಿನಲ್ಲಿ 100 ತೆಂಗಿನ ಮರಗಳು ಇರುತ್ತವೆ. ನಾನು ನೋಡಿಕೊಳ್ಳುತ್ತಿರುವ 70 ತೆಂಗಿನ ಮರಗಳ ವಯಸ್ಸು ಅಂದಾಜು 15 ವರ್ಷ ಆಗಿರಬಹುದು. 2 ನೇ ಪ್ರತಿವಾದಿ ಸ್ವಾಧೀನ ಇರುವ ಜಮೀನಿನ ತೆಂಗಿನ ಮರಗಳಿಗೂ ಸಹ 15 ವರ್ಷ ಆಗಿರಬಹುದು. ದಾವಾ ಐಟಂ ನಂ 3 ರ ಸರ್ವೆ ನಂ 45ಃ8 ಆಗಿರುತ್ತದೆ. ಸದರಿ ಜಮೀನಿನ ಪಹಣಿಯು ನನ್ನ ಮತ್ತು 3 ನೇ ಪ್ರತಿವಾದಿಯ ಹೆಸರಿನಲ್ಲಿ ಜಂಟಿಯಾಗಿರುತ್ತದೆ ಎಂದರೆ ಸರಿ. ಸದರಿ ಪಹಣಿಯು ನನ್ನ ತಂದೆಯ ಮರಣಾನಂತರ ನನಗೆ ಪೌತಿ ಆಧಾರದ ಮೇಲೆ ಬಂತು ಎಂದರೆ ಸಾಕ್ಷಿ ಮುಂಚೆಯೇ ಬಂದಿತ್ತು ಎಂದು ನುಡಿಯುತ್ತಾರೆ. ಸದರಿ ಆಸ್ತಿಯ ಪಹಣಿಯನ್ನು ನಾನು ನೋಡಿರುವುದಿಲ್ಲ.

ನನ್ನ ತಂದೆಯವರು ಮರಣ ಹೊಂದಿ ಸುಮಾರು 30 ವರ್ಷಕ್ಕಿಂತ ಜಾಸ್ತಿಯಾಗಿರುತ್ತದೆ. ತಂದೆಯ ಮರಣಾನಂತರ ದಾವಾ ಐಟಂ ನಂ 3 ರ ಆಸ್ತಿಯು ಪೌತಿ ಆಧಾರದ ಮೇಲೆ ಬಂದಿರುವ ವಿಚಾರ ನನಗೆ ಗೊತ್ತಿದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ 1 ಮತ್ತು 2 ರ ಆಸ್ತಿಗಳು ನನ್ನ ಚಿಕ್ಕಪ್ಪ ರಂಗಪ್ಪ ರವರ ಹೆಸರಿನಲ್ಲಿರುತ್ತದೆ. ಸದರಿ ಪಹಣಿಯು ಈಗಲೂ 1 ನೇ ಪ್ರತಿವಾದಿ ಹೆಸರಿನಲ್ಲಿ ಮುಂದುವರೆಯುತ್ತಿದೆಯಾ ಎಂದರೆ ಸಾಕ್ಷಿ ನಾನು ತಿಳಿದುಕೊಂಡಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗಳು ತಾಲ್ಲೂಕು ಕಛೇರಿಯಲ್ಲಿ ಕೆಲಸ ಮಾಡಿಕೊಂಡಿರುತ್ತಾರೆ. ನನ್ನ ಮಗಳು ಕಡೂರಿನ ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ಕಂಪ್ಯೂಟರ್ ವಿಭಾಗದಲ್ಲಿ ಕೆಲಸ ಮಾಡಿಕೊಂಡಿರುತ್ತಾರೆ ಎಂದರೆ

ನನಗೆ ಗೊತ್ತಿಲ್ಲ. ಐಟಂ ನಂ 1 ರ ವಿಸ್ತೀರ್ಣ 27 ಗುಂಟೆ, ಐಟಂ ನಂ 3 ರ ವಿಸ್ತೀರ್ಣ 2 ಎಕರೆ 11 ಗುಂಟೆ ಎಂದರೆ ಅದು ಒಟ್ಟು ಕುಟುಂಬದ ಆಸ್ತಿ ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಐಟಂ ನಂ 1 ರ ಆಸ್ತಿ ತೆಂಗಿನ ತೋಟ ಎಂದರೆ ಸರಿ. ಐಟಂ ನಂ 2 ರ ಆಸ್ತಿಯು ಖಾಲಿ ಜಮೀನು ಎಂದರೆ ಸರಿ. ಐಟಂ ನಂ 1 ಮತ್ತು 2 ರ ಆಸ್ತಿಯನ್ನು 2 ನೇ ಪ್ರತಿವಾದಿ ಉಳುಮೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಈ ಹಿಂದೆ ನಾವೂ ಉಳುಮೆ ಮಾಡುತ್ತಿದ್ದೆವು ನನ್ನ ತಾಯಿ ಮರಣಾನಂತರ 2 ನೇ ಪ್ರತಿವಾದಿ ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ ಎಂದು ನುಡಿಯುತ್ತಾರೆ.

ಐಟಂ ನಂ 1 ಮತ್ತು 2 ರ ಖಾತೆ ಯಾರ ಹೆಸರಿಗೆ ಇದೆ ಎಂದು ನಾನು ಪರಿಶೀಲಿಸಿರುವುದಿಲ್ಲ. ನನ್ನ ಮಗಳು ಪರಿಶೀಲನೆ ಮಾಡಿರುತ್ತಾರೋ ಇಲ್ಲವೋ ಎಂದು ನಾನು ಅವರ ಬಳಿ ಕೇಳಿರುವುದಿಲ್ಲ. 1995 ರಲ್ಲಿ 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ವಿರುದ್ಧ ಹೂಡಿರುವ ದಾವೆಯ ಬಗ್ಗೆ ನನಗೆ ಮಾಹಿತಿ ಇಲ್ಲಾ. ಈ ದಾವೆ ಹೂಡಿದ ನಂತರವೂ ಸಹ ಆಸ್ತಿಗಳ ಖಾತೆಯು ಯಾರ ಹೆಸರಿನಲ್ಲಿದೆ ಎಂಬ ಬಗ್ಗೆಯಾಗಲೀ 2 ನೇ ಪ್ರತಿವಾದಿ 1 ನೇ ಪ್ರತಿವಾದಿ ವಿರುದ್ಧ ಹೂಡಿದ ದಾವೆಯ ಬಗ್ಗೆ ತಿಳಿಯಲು ಪ್ರಯತ್ನಪಟ್ಟಿಲ್ಲ. ನಾನು ಈ ದಾವೆಗೆ ತಕರಾರು ಹಾಕುವ ಪೂರ್ವದಲ್ಲಿ 2 ನೇ ಪ್ರತಿವಾದಿಯು ನ್ಯಾಯಾಲಯಕ್ಕೆ ಏನು ದಾಖಲೆ ಹಾಕಿರುತ್ತಾರೆ ಎಂದು ನನ್ನ ವಕೀಲರ ಬಳಿ ಕೇಳಿ ತಿಳಿದುಕೊಂಡಿರುವುದಿಲ್ಲ. ದಾವಾ ಐಟಂ ನಂ 1 ಮತ್ತು 2 ರ ಆಸ್ತಿಗಳು 2 ನೇ ಪ್ರತಿವಾದಿಗೆ ಹಕ್ಕು ಖುಲಾಸೆಯ ಮೂಲಕ ಬಂದಿರುವ ಕಾರಣ ಅದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸಾಕ್ಷಿಯು ಯಾವುದೇ ಹಕ್ಕು ಖುಲಾಸೆ ಆಗಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ 1 ಮತ್ತು 2 ರ ಆಸ್ತಿಗಳನ್ನು 1 ನೇ ಪ್ರತಿವಾದಿ ಅಡಮಾನ ಮಾಡಿ ಬ್ಯಾಂಕಿನಿಂದ ಸಾಲ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಎಲ್ಲಾ ವ್ಯವಹಾರವನ್ನು 1 ನೇ ಪ್ರತಿವಾದಿ ಮಾಡುತ್ತಾರೆ ಎಂದು ನುಡಿಯುತ್ತಾರೆ.

ಐಟಂ ನಂ 3 ರಲ್ಲಿ ನಾನು ಮತ್ತು 4 ನೇ ಪ್ರತಿವಾದಿ ನೋಡಿಕೊಳ್ಳುತ್ತಿರುವ ಜಮೀನಿನ ತೆಂಗಿನ ಕಾಯಿಗಳ ಪೈಕಿ 4 ನೇ ಪ್ರತಿವಾದಿಗೆ ಅವರು ಕೇಳಿದಾಗ ಕೊಟ್ಟು ಉಳಿದ ಕಾಯಿಗಳನ್ನು ನಾನೇ ಇಟ್ಟುಕೊಳ್ಳುತ್ತೇನೆ. ಸದರಿ ಜಮೀನಿನಲ್ಲಿ ನಾವುಗಳು ಸಪ್ಪೆಗಳನ್ನು ಬೆಳೆಯುತ್ತೇವೆ. ಸದರಿ ಆಸ್ತಿಯ ಕಾಯಿ ಮತ್ತು ಫಲಸನ್ನು 4 ನೇ ಪ್ರತಿವಾದಿಗೆ ಹೊರತುಪಡಿಸಿ ಬೇರೆ ಯಾರಿಗೂ ನಾನು ನೀಡುತ್ತಿಲ್ಲ. ಐಟಂ ನಂ 1 ಮತ್ತು 2 ರ ಆಸ್ತಿಗಳು 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದು ಅದರಲ್ಲಿ ನಮಗೆ ಯಾರಿಗೂ ಹಕ್ಕು ಅಧಿಕಾರ ಸ್ವಾಧೀನ ಇಲ್ಲಾ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಒಟ್ಟು ಕುಟುಂಬದ ಆಸ್ತಿ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಐಟಂ ನಂ 1 ಮತ್ತು 2 ರ ಆಸ್ತಿಗಳ ಖಾತೆ ಈ ಹಿಂದೆ ನನ್ನ ಅಜ್ಜ ತಿಮ್ಮಪ್ಪ ರವರ ಹೆಸರಿನಲ್ಲಿತ್ತು. ಎಷ್ಟು ವರ್ಷಗಳ ಕಾಲ ಖಾತೆ ಅವರ

ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ಅವರು 8 ವರ್ಷಗಳ ಹಿಂದೆ ಮರಣಹೊಂದುವವರೆಗೂ ಅವರ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ದಾವಾ ಐಟಂ 1 ಮತ್ತು 2 ರ ಆಸ್ತಿಗಳ ಮೇಲೆ 1977 ರಲ್ಲಿ 2 ನೇ ಪ್ರತಿವಾದಿಗೆ ಹಕ್ಕು ಖುಲಾಸೆ ಆಗಿರುವ ವಿಚಾರ ನನಗೆ ತಿಳಿದಿದ್ದರೂ ಸಹ ಸದರಿ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಹಕ್ಕು ಖುಲಾಸೆ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ 1 ಮತ್ತು 2 ರ ಆಸ್ತಿಯಲ್ಲಿ 2 ನೇ ಪ್ರತಿವಾದಿ ನನಗೆ ಪಾಲು ನೀಡಲು ನಿರಾಕರಿಸಿದ ಕಾರಣ ವಾದಿ ಮತ್ತು 1 ನೇ ಪ್ರತಿವಾದಿಯೊಂದಿಗೆ ಶರೀಖಾಗಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು 1 ನೇ ಪ್ರತಿವಾದಿ ಮಾತು ಕೇಳಿ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ 3 ರಲ್ಲಿ ಮಾತ್ರ ನನಗೆ ಮತ್ತು 2, 4 ನೇ ಪ್ರತಿವಾದಿಗೆ ಹಕ್ಕಿದ್ದರೂ 2 ನೇ ಪ್ರತಿವಾದಿಗೆ ಸೇರಿದ ಇತರೆ ದಾವಾ ಐಟಂ ಆಸ್ತಿಗಳನ್ನು ಲಪಟಾಯಿಸುವ ಸಲುವಾಗಿ ವಾದಿಯ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು 1, 2 ನೇ ಪ್ರತಿವಾದಿಗಳ ನಡುವೆ ಒಟ್ಟು ಕುಟುಂಬ ವ್ಯವಸ್ಥೆ ಇಲ್ಲಾ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು 1977 ರಲ್ಲಿ ತನ್ನ ಪಾಲಿನ ಹಿಸ್ಸೆಯ ಹಣವನ್ನು ಪಡೆದು 2 ನೇ ಪ್ರತಿವಾದಿಗೆ ಹಕ್ಕು ಖುಲಾಸೆ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಕ್ಕು ಖುಲಾಸೆಗೆ 2 ನೇ ಪ್ರತಿವಾದಿಯೇ ತನ್ನ ದುಡಿಮೆಯ ಹಣವನ್ನು 1 ನೇ ಪ್ರತಿವಾದಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ 1 ಮತ್ತು 2 ರ ಜಮೀನಿಗೆ ಸಂಬಂಧಿಸಿದಂತೆ ನೀವು ಇದುವರೆವಿಗೂ 1 ನೇ ಪ್ರತಿವಾದಿಗೆ ಯಾವತ್ತಾದರೂ ಹಣ ನೀಡಿರುತ್ತೀರಾ ಎಂದರೆ ಸಾಕ್ಷಿ ಅವರು ಕೇಳಿರುವುದಿಲ್ಲ ನಾನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.